**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ಮತ್ತು ವಿಶೇಷ ನ್ಯಾಯಾಧೀಶರು ಚಿಕ್ಕಮಗಳೂರು.**

**ಸ್ಪೆಷಲ್ ಮೊಕದ್ದಮೆ ಸಂಖ್ಯೆ: 83/2018**

| | | |
|---|---|---|
| 1 ನೇ ಆರೋಪಿಯ ಹೆಸರು | : | ಪ್ರಕಾಶ್ ಯು.ಹೆಚ್ |
| ತಂದೆಯ ಹೆಸರು | : | ಹೂವಪ್ಪಗೌಡ |
| ವಯಸ್ಸು | : | ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಉಜ್ಜಿನಿ, ಬಿದರೆ ಗ್ರಾಮ, ಖಾಂಡ್ಯ ಹೋಬಳಿ, ಚಿಕ್ಕಮಗಳೂರು. |
| 2 ನೇ ಆರೋಪಿಯ ಹೆಸರು | : | ಸುದೀರ ಯು.ಎಂ |
| ತಂದೆಯ ಹೆಸರು | : | ಮಂಜಪ್ಪಗೌಡ |
| ವಯಸ್ಸು | : | ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಉಜ್ಜಿನಿ, ಬಿದರೆ ಗ್ರಾಮ, ಖಾಂಡ್ಯ ಹೋಬಳಿ, ಚಿಕ್ಕಮಗಳೂರು. |
| 3 ನೇ ಆರೋಪಿಯ ಹೆಸರು | : | ಬೋಬಣ್ಣ ಅಲಿಯಾಸ್ ಕುಂದೇಗೌಡ |
| ತಂದೆಯ ಹೆಸರು | : | ಹೂವಪ್ಪಗೌಡ |
| ವಯಸ್ಸು | : | ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಉಜ್ಜಿನಿ, ಬಿದರೆ ಗ್ರಾಮ, ಖಾಂಡ್ಯ ಹೋಬಳಿದ ಚಿಕ್ಕಮಗಳೂರು. |

**ಕಲಂ 313 ಸಿ.ಆರ್ ಪಿ.ಸಿ. ಅಡಿಯಲ್ಲಿ ಆರೋಪಿತರ ಹೇಳಿಕೆ.**

ಪ್ರಶ್ನೆ -1 ಅಭಿಯೋಜನೆಯ ಸಾಕ್ಷಿಗಳ ಸಾಕ್ಷ್ಯ ವಿಚಾರವನ್ನು ಕೇಳಿದ್ದೀರಾ?

ಉತ್ತರ: ಆ 1- ಕೇಳಿದ್ದೇನೆ
ಆ 2- ಕೇಳಿದ್ದೇನೆ
ಆ 3- ಕೇಳಿದ್ದೇನೆ

ಪ್ರಶ್ನೆ-2 ಪ್ರಾಸಾ.3 ಶಿವಪ್ಪ ಇವರು ತಮ್ಮ ಸಾಕ್ಷ್ಯದಲ್ಲಿ ದಿ: 08.01.2018 ರಂದು ಅವರು ಸ್ವಂತ ಕೆಲಸದ ನಿಮಿತ್ತ ಬಾಳೆಹೊನ್ನೂರಿಗೆ ಹೋಗಿ ಕೆಲಸ ಮುಗಿಸಿಕೊಂಡು ಸಂಜೆ 4.30 ಕ್ಕೆ ಸಾರಿಗೆ ಬಸ್ಸಿನಲ್ಲಿ ಚಾಸಾ.2-ವಿಠಲ ಮತ್ತು 3-ಶಂಕರರವರೊಂದಿಗೆ ಬರುತ್ತಿದ್ದುದಾಗಿ, ಸಂಜೆ 5.00 ಕ್ಕೆ ಖಾಂಡ್ಯ ದೇವಾಲಯದ ಆರ್ಚ್ ಬಳಿ ಬಸ್ಸು ಹೋಗುವಾಗ ಅವರು ಡೋರ್ ಪಕ್ಕದಲ್ಲಿ ನಿಂತಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ: ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-3 ಪ್ರಾಸಾ.3 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆರೋಪಿತರಾದ ನೀವು ರಸ್ತೆ ಮಧ್ಯದಲ್ಲಿ ಫೋನ್ ಮಾಡಿಕೊಂಡು ನಿಂತಿದ್ದು ಅವರು ನಿಮಗೆ ಸೈಡಿಗೆ ಹೋಗುವಂತೆ ಹೇಳಿದಾಗ ಅವರಿಗೆ ಕೆಟ್ಟದಾಗಿ ಬೈಯ್ದು, ಜಗಳ ಮಾಡಿ, ಜಾತಿನಿಂದನೆ ಮಾಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-4 ಪ್ರಾಸಾ.3 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಬಸ್ಸು ಬನ್ನಿ ಮಹಾಕಾಳಿ ದೇವಸ್ಥಾನದ ಬಳಿ ನಿಂತಾಗ ಆರೋಪಿತರಾದ ನೀವು ಅವರಿಗೆ ಬಸ್ಸಿನಿಂದ ಇಳಿಯುವಂತೆ ಹೇಳಿದ್ದಾಗಿ, ನಂತರ ಆರೋಪಿತರಾದ ನೀವು ಬಸ್ಸಿನಿಂದ ಅವರ ಕೈ ಹಿಡಿದು ಎಳೆದು ಅವರ ಎಡ ಕಪಾಳಕ್ಕೆ, ಬಲಭುಜಕ್ಕೆ ಮತ್ತು ಕುತ್ತಿಗೆ, ಬೆನ್ನಿಗೆ ಹೊಡೆದಿದ್ದಾಗಿ ಹಾಗೂ ಅವರು ಧರಿಸಿದ್ದ ಬಟ್ಟೆಯನ್ನು ಹರಿದು ಹಾಕಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-5 ಪ್ರಾಸಾ.3 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆರೋಪಿತರಾದ ನೀವು ಅವರಿಗೆ ಸೂಳೆಮಗನೇ, ಬೋಳಿಮಗನೇ, ಎಸ್.ಸಿ. ಜಾತಿನಾಡ ಎಂದು ಜಾತಿ ನಿಂದನೆ ಮಾಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-6 ಪ್ರಾಸಾ.3 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆರೋಪಿತರಾದ ನೀವು ಅಲ್ಲಿಂದ ಹೋಗುವಾಗ ನಿನ್ನನ್ನು ಸಾಯಿಸದೇ ಬಿಡುವುದಿಲ್ಲ ಎಂದು ಅವರಿಗೆ ಕೊಲೆ ಬೆದರಿಕೆ ಹಾಕಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-7 ಪ್ರಾಸಾ.3 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಚಾಸಾ.2 ಮತ್ತು 3 ರವರು ಜಗಳ ಬಿಡಿಸಿ ಅವರನ್ನು ಮನೆಗೆ ಕರೆದುಕೊಂಡು ಹೋಗಿ ಬಿಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-8 ಪ್ರಾಸಾ.3 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ರಾತ್ರಿ 8.00 ಗಂಟೆಗೆ ಅವರಿಗೆ ನೋವು ಜಾಸ್ತಿಯಾಗಿದ್ದಾಗಿ ಅವರ ತಾಯಿಯಾದ ಚಾಸಾ.7 ರವರ ಜೊತೆ ಕಡಬಗೆರೆಗೆ ಬಂದು, ನಂತರ ಚಿಕ್ಕಮಗಳೂರು ಮಲ್ಲೇಗೌಡ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುವ ಕಾಲಕ್ಕೆ ಆರೋಪಿತರಾದ ನಿಮ್ಮ ವಿರುದ್ಧ ನಿಪಿ.4 ರಂತೆ ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-9 ಪ್ರಾಸಾ.3 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದೂರು ದಾಖಲಾದ ನಂತರ ಪೋಲೀಸರು ದಿಃ10.01.2018 ರಂದು ಸ್ಥಳಕ್ಕೆ ಬಂದಾಗ ಅವರು ತೋರಿಸಿದ ಸ್ಥಳದಲ್ಲಿ, ಪಂಚರಾದ ಚಾಸಾ.8-ಪ್ರಭಾಕರ ಮತ್ತು 9-ಅಜಯ್ ಕುಮಾರ್ ರವರ ಸಮಕ್ಷಮ ಸ್ಥಳ ಪರಿಶೀಲಿಸಿದ್ದಾಗಿ, ಮೊದಲ ಮಹಜರನ್ನು ಉಜಿನಿ ಬಸ್ ನಿಲ್ದಾಣದ ಮಹಾಕಾಳಿ ದೇವಸ್ಥಾನದ ಹತ್ತಿರ ಜರುಗಿಸಿದ್ದಾಗಿ, ನಂತರ ಮುಂದುವರೆದು ಮಹಜರನ್ನು ಖಾಂಡ್ಯ ಗೇಟಿನ ಹತ್ತಿರ ಇರುವ ಆರ್ಚ್ ಬಳಿ ಮದ್ಯಾಹ್ನ 3.00 ರಿಂದ 5.00 ರವರೆಗೆ ತನ್ನ ಹಾಗೂ ಪಂಚರ ಸಮಕ್ಷಮ ನಿಪಿ.5 ರಂತೆ ಮಹಜರು ಮಾಡಿದ್ದಾಗಿ, ಈ ಬಗ್ಗೆ ಅವರು ಪೋಲೀಸರಿಗೆ ಮರು ಹೇಳಿಕೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-10 ಪ್ರಾಸಾ.5 ವಿಠಲ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 08.01.2018 ರಂದು ಅವರು ಕೆಎ-18/823 ರ ಸಹಕಾರ ಸಾರಿಗೆ ಬಸ್ಸಿನಲ್ಲಿ ಬಾಳೆಹೊನ್ನೂರಿನಿಂದ ಬರುತ್ತಿದ್ದು, ಬಸ್ಸು ಖಾಂಡ್ಯ ಚೆಕ್ ಪೋಸ್ಟ್ ಬಳಿ ಬಂದಾಗ ಆರೋಪಿತರಾದ ನೀವು ಬೈಕನ್ನು ರಸ್ತೆ ಮದ್ಯೆ ನಿಲ್ಲಿಸಿಕೊಂಡು ಮಾತನಾಡುತ್ತಿದ್ದಾಗ ಬಸ್ಸನ್ನು ನಿಲ್ಲಿಸಿ ಬಸ್ಸಿನಲ್ಲಿದ್ದವರು ಸೈಡ್ ಬಿಡುವಂತೆ ಹೇಳಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-11 ಪ್ರಾಸಾ.5 ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ.1-ಶಿವಪ್ಪ ರವರು ಆರೋಪಿತರಾದ ನಿಮಗೆ ಸೈಡಿಗೆ ನಿಲ್ಲಿಸಿ ಎಂದು ಹೇಳಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-12 ಪ್ರಾಸಾ.5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಆರೋಪಿತರಾದ ನೀವು ಬಸ್ಸನ್ನು ಹಿಂಬಾಲಿಸಿಕೊಂಡು ಬಂದು ಉಜಿನಿ ಬಸ್ಸು ನಿಲ್ದಾಣದಲ್ಲಿ ಚಾಸಾ.1 ರವರ ಮೇಲೆ ಹಲ್ಲೆ ಮಾಡಿ, ಸೂಳೆಮಗನೇ, ಜಾತಿನಾಡ ಎಂದು ಬೈದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-13 ಪ್ರಾಸಾ.5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆರೋಪಿತರಾದ ನೀವು ಚಾಸಾ.1 ರವರು ಧರಿಸಿದ್ದ ಟೀ ಶರ್ಟ್ ಹಿಡಿದು ಎಳೆದು ಹರಿದು, ಕೋಲಿನಿಂದ ಹೊಡೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-14 ಪ್ರಾಸಾ.5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅವರು ಮತ್ತು ಚಾಸಾ.3 ರವರು ಜಗಳ ಬಿಡಿಸಿ ಚಾಸಾ.1 ರವರನ್ನು ಅವರ ಮನೆಗೆ ಬಿಟ್ಟಿದ್ದಾಗಿ ನಂತರ ಅವರ ಮನೆಯವರು ಚಾಸಾ.1 ರವರನ್ನು ಚಿಕ್ಕಮಗಳೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-15 ಪ್ರಾಸಾ.5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 08.01.2018 ರಂದು ಆರೋಪಿತರಾದ ನೀವು ಬೈಕನ್ನು ರಸ್ತೆಗೆ ಅಡ್ಡಲಾಗಿ ನಿಲ್ಲಿಸಿಕೊಂಡಿದ್ದು, ಬಸ್ ಡ್ರೈವರ್ ಹಾರ್ನ್ ಮಾಡಿದರೂ ಸಹ ಸೈಡ್ ಕೊಡದಿದ್ದಾಗ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಚಾಸಾ.1 ರವರು ನಿಮಗೆ ಸೈಡ್ ಕೊಡುವಂತೆ ಕೇಳಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-16 ಪ್ರಾಸಾ.5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆಗ ಆರೋಪಿತರಾದ ನೀವು ಚಾಸಾ.1 ರವರಿಗೆ ಸೂಳೆ ಮಗನೇ, ನಮಗೆ ಸೈಡ್ ಕೊಡು ಎಂದು ಹೇಳಲಿಕ್ಕೆ ನೀನು ಯಾರು ಎಂದು ಬಾಯಿಗೆ ಬಂದಂತೆ ಬೈಯ್ದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-17 ಪ್ರಾಸಾ.5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಬಸ್ಸು ಉಜ್ಜನಿ ಬಸ್ ನಿಲ್ದಾಣದ ಹತ್ತಿರ ಬಂದಾಗ ಆರೋಪಿತರಾದ ನೀವು ಬಂದು ಬಸ್ಸಿಗೆ ಅಡ್ಡಲಾಗಿ ಬೈಕನ್ನು ನಿಲ್ಲಿಸಿ, ಬಸ್ಸಿನ ಡೋರ್ ಬಳಿ ನಿಂತಿದ್ದ ಚಾಸಾ.1 ರವರನ್ನು ಬಸ್ಸಿನಿಂದ ಕೆಳಗೆ ಎಳೆದುಕೊಂಡು ಹೊಲೆಯ ಸೂಳೇಮಗನೇ, ಜಾತಿನಾಡ, ರಸ್ತೆ ನಿನ್ನ ಅಪ್ಪನಧ ರಸ್ತೆ ಬಿಡು ಎಂದು ನಮಗೆ ಹೇಳುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಜಾತಿನಿಂದನೆ ಮಾಡಿ ಬೈಯ್ದು, ಕೈಯಿಂದ ಮೈಕೈಗೆ ಹೊಡೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-18 ಪ್ರಾಸಾ.5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅಲ್ಲದೆ ಚಾಸಾ.1 ರವರ ಶರ್ಟ್‌ನ್ನು ಹರಿದು ಬಿಸಾಡಿ, ರಸ್ತೆ ಬದಿಯಲ್ಲಿ ಚಾಸಾ.1 ರವರನ್ನು ನೆಲಕ್ಕೆ ಹಾಕಿ ಚಪ್ಪಲಿ ಕಾಲಿನಲ್ಲಿ ತುಳಿದು ಜಾತಿ ನಿಂದನೆ ಮಾಡಿ, ನಿಮ್ಮ ತಂಟೆಗೆ ಬಂದರೆ ಅವರನ್ನು ಕೊಲೆ ಮಾಡುವುದಾಗಿ ಆರೋಪಿತರಾದ ನೀವು ಬೆದರಿಕೆ ಹಾಕಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-19 ಪ್ರಾಸಾ.6 ಶಿವಾನಂದ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 08.01.2018 ರಂದು ಸಂಜೆ 4.30 ರಿಂದ 5.00 ರ ಸುಮಾರಿಗೆ ಚಾಸಾ.2 ಮತ್ತು 3 ರವರು ಅವರ ಅಣ್ಣನಾದ ಚಾಸಾ.1 ರವರನ್ನು ಅವರ ಮನೆಗೆ ಕರೆದುಕೊಂಡು ಬಂದಾಗ ಚಾಸಾ.1 ರವರ ಮೈಮೇಲೆ ಶರ್ಟ್ ಇರಲಿಲ್ಲ, ಆದರೆ ಪ್ಯಾಂಟು ಇದ್ದುದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-20 ಪ್ರಾಸಾ.6 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆ ಬಗ್ಗೆ ಅವರು ಮತ್ತು ಅವರ ತಂದೆ ತಾಯಿ ಚಾಸಾ.1 ರವರನ್ನು ಏನಾಯಿತು ಎಂದು ಕೇಳಿದಾಗ ಬಾಳೆಹೊನ್ನೂರಿನಿಂದ ಕೆಎ-18/ಎ-823 ಸಹಕಾರ ಸಾರಿಗೆ ಬಸ್ಸಿನಲ್ಲಿ ಊರಿಗೆ ಬರುವಾಗ, ಸಂಜೆ 4.30 ಕ್ಕೆ ಖಾಂಡ್ಯ ಆರ್ಚ್ ಹತ್ತಿರ ಬನ್ನಿಮಹಾಕಾಳಿ ದೇವಸ್ಥಾನದ ಹತ್ತಿರ ಆರೋಪಿತರಾದ ನೀವು ಬೈಕಿನಲ್ಲಿ ಬಂದು ಬಸ್ಸನ್ನು ಅಡ್ಡಹಾಕಿದ್ದೀರೆಂದು ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-21 ಪ್ರಾಸಾ.6 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಬಸ್ಸನ್ನು ಫಾಲೋ ಮಾಡಿಕೊಂಡು ಬಂದು ಉಜಿನಿ ಬಸ್ಸು ನಿಲ್ದಾಣದ ಬಳಿ ಚಾಸಾ.1 ರವರನ್ನು ಬಸ್ಸಿನಿಂದ ಎಳೆದು ಹಾಕಿ ಶರ್ಟ್ ನ್ನು ಹರಿದು, ಹೊಡೆದು ಹಾಕಿದ್ದಾಗಿ, ನಂತರ ಅದೇ ಬಸ್ಸಿನಲ್ಲಿ ಚಾಸಾ.2 ಮತ್ತು 3 ರವರು ಚಾಸಾ.1 ರವರನ್ನು ಕರೆದುಕೊಂಡು ಬಂದಿದ್ದಾರೆಂದು ಗೊತ್ತಾಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-22 ಪ್ರಾಸಾ.6 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅದೇ ದಿನ ರಾತ್ರಿ 8.00 ಗಂಟೆಗೆ ಚಾಸಾ.1 ರವರಿಗೆ ನೋವು ಜಾಸ್ತಿಯಾದ ಕಾರಣ ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಗೆ ಅವರು ಮತ್ತು ಚಾಸಾ.7 ರವರು ಆಟೋದಲ್ಲಿ ಕರೆದುಕೊಂಡು ಬಂದಿದ್ದಾಗಿ, ಈ ಬಗ್ಗೆ ಅವರು ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-23 ಪ್ರಾಸಾ.6 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 08.01.2018 ರಂದು ಆರೋಪಿತರಾದ ನೀವು ಬೈಕನ್ನು ರಸ್ತೆಗೆ ಅಡ್ಡಲಾಗಿ ನಿಲ್ಲಿಸಿಕೊಂಡಿದ್ದು, ಬಸ್ ಡ್ರೈವರ್ ಹಾರ್ನ ಮಾಡಿದರೂ ಸಹ ಸೈಡ್ ಕೊಡದಿದ್ದಾಗ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಚಾಸಾ.1 ರವರು ನಿಮಗೆ ಸೈಡ್ ಕೊಡುವಂತೆ ಕೇಳಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-24 ಪ್ರಾಸಾ.6 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆಗ ಆರೋಪಿತರಾದ ನೀವು ಚಾಸಾ.1 ರವರಿಗೆ ಸೂಳೆ ಮಗನೇ, ನಮಗೆ ಸೈಡ್ ಕೊಡು ಎಂದು ಹೇಳಲಿಕ್ಕೆ ನೀನು ಯಾರು ಎಂದು ಬಾಯಿಗೆ ಬಂದಂತೆ ಬೈಯ್ದು, ಉಜ್ಜನಿ ಬಸ್ ನಿಲ್ದಾಣದ ಹತ್ತಿರ ಬಸ್ಸಿಗೆ ಬೈಕನ್ನು ಅಡ್ಡಲಾಗಿ ನಿಲ್ಲಿಸಿ, ಚಾಸಾ.1 ರವರನ್ನು ಬಸ್ಸಿನಿಂದ ಕೆಳಗೆ ಎಳೆದುಕೊಂಡು, ರಸ್ತೆ ನಿನ್ನ ಅಪ್ಪನದ, ರಸ್ತೆ ಬಿಡು ಎಂದು ನಮಗೆ ಹೇಳುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಜಾತಿನಿಂದನೆ ಮಾಡಿ, ಕೈಯಿಂದ ಮೈಕೈಗೆ ಹೊಡೆದು, ರಸ್ತೆ ಬದಿಯಲ್ಲಿ ಚಾಸಾ.1 ರವರನ್ನು ನೆಲಕ್ಕೆ ಹಾಕಿ ಚಪ್ಪಲಿ ಕಾಲಿನಲ್ಲಿ ತುಳಿದಿದ್ದು, ಈ ಬಗ್ಗೆ ಪೋಲಿಸರಿಗೆ ದಿಃ10.01.2018 ರಂದು ಹೇಳಿಕೆ ಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-25 ಪ್ರಾಸಾ.7 ಅಜಯ್ ಕುಮಾರ್ ಇವರು ತಮ್ಮ ಸಾಕ್ಷ್ಯದಲ್ಲಿ ಪೊಲೀಸರು ಚಾಸಾ-1 ರವರಿಗೆ ಹಲ್ಲೆ ಮಾಡಿದ ಸಂಬಂಧ ಅವರು ತೋರಿಸಿದ ಸ್ಥಳಗಳಲ್ಲಿ ಅಂದರೆ ಖಾಂಡ್ಯ ಆರ್ಚ್ ಬಳಿ ಮಧ್ಯಾಹ್ನ 3-30 ಯಿಂದ 5-00 ಗಂಟೆವರೆಗೆ ಹಾಗೂ ಉಜ್ಜಿನಿ ಸ್ಟ್ಯಾಂಡ್ ಹತ್ತಿರ 3-00 ಗಂಟೆಯಿಂದ 4-00 ವರೆಗೆ ನಿಪಿ.5 ರಂತೆ ಮಹಜರನ್ನು ಬರೆದು, ಸದರಿ ಮಹಜರಿಗೆ ಅವರು ಸಹಿ ಮಾಡಿದ್ದಾಗಿ ಹಾಗೂ ಪೊಲೀಸರು ನಿಪಿ.8 ರಂತೆ ಫೋಟೋವನ್ನು ತೆಗೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-26 ಪ್ರಾಸಾ.8 ಡಾ.ಶ್ರೀನಿವಾಸ ಜಿ.ಸಿ, ಮಕ್ಕಳ ತಜ್ಞರು, ತಮ್ಮ ಸಾಕ್ಷ್ಯದಲ್ಲಿ ದಿಃ 09.01.2018 ರಂದು ರಾತ್ರಿ 12.30 ಕ್ಕೆ ಚಾಸಾ.1 ಶಿವಪ್ಪ ಇವರು ಹಲ್ಲೆಗೊಳಗಾದ ಹಿನ್ನೆಲೆಯಿಂದ ಉಂಟಾದ ಗಾಯಗಳ ಚಿಕಿತ್ಸೆಗಾಗಿ ಅವರ ಆಸ್ಪತ್ರೆಗೆ ಬಂದಿದ್ದಾಗಿ, ಅವರು ಚಾಸಾ-1 ರವರನ್ನು ಪರೀಕ್ಷಿಸಿದಾಗ 1) ಎಡಕೆನ್ನೆ ಹಾಗೂ ಮೂಗಿನ ಪಕ್ಕದಲ್ಲಿ ಊತ ಹಾಗೂ ಮುಟ್ಟಿದರೆ ನೋವು, 2) ಎಡಭುಜ, ಕುತ್ತಿಗೆ ಹಿಂಭಾಗ ಹಾಗೂ ಬೆನ್ನಿನ ಎಡಭಾಗದಲ್ಲಿ ನೋವು ಕಂಡುಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-27 ಪ್ರಾಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಸದರಿ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳೆಂದು ಅಭಿಪ್ರಾಯಪಟ್ಟು, ನಿಪಿ.12 ರಂತೆ

ಗಾಯದ ಪ್ರಮಾಣಪತ್ರವನ್ನು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-28 ಪ್ರಾಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಕೈಯಿಂದ ಬಲವಾಗಿ ಹೊಡೆದಾಗ ನಿಪಿ-12 ರಲ್ಲಿ ಹೇಳಿದ ಗಾಯಗಳಾಗುವ ಸಾಧ್ಯತೆ ಇರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-29 ಪ್ರಾಸಾ.9 ಹೆಚ್.ಎಸ್. ಮಂಜುನಾಥಗೌಡ, ಆಗಿನ ಬಾಳೆಹೊನ್ನೂರು ಪೊಲೀಸ್ ಠಾಣೆಯ ಎ.ಎಸ್.ಐ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ09.01.2018 ರಂದು ಅವರು ಠಾಣಾ ಪ್ರಭಾರದಲ್ಲಿದ್ದಾಗ ಮುಖ್ಯ ಪೇದೆ ರವಿರವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಚಾಸಾ.1 ರವರ ಹೇಳಿಕೆ ನಿಪಿ.4 ನ್ನು ಪಡೆದು ತಂದು ಹಾಜರುಪಡಿಸಿದ್ದನ್ನು ಪಡೆದು ಠಾಣಾ ಮೊ.ಸಂಃ4/2018 ರಲ್ಲಿ ಪ್ರಕರಣವನ್ನು ದಾಖಲಿಸಿ, ನಿಪಿ.13 ರಂತೆ ಪ್ರಥಮ ವರ್ತಮಾನ ವರದಿಯನ್ನು ಮೇಲಾಧಿಕಾರಿಗಳಿಗೂ ಮತ್ತು ನ್ಯಾಯಾಲಯಕ್ಕೂ ಕಳುಹಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-30 ಪ್ರಾಸಾ.10 ಮಂಜುನಾಥ ಆರ್, ಆಗಿನ ಬಾಳೆಹೊನ್ನೂರು ಠಾಣೆಯ ಪೋಲೀಸ್ ಪೇದೆ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 10.01.2018 ರಂದು ಪ್ರಕರಣದ ತನಿಖಾ ಕಾಲದಲ್ಲಿ ತನಿಖಾಧಿಕಾರಿಯಾದ ಚಾಸಾ.20 ರವರು ಸಾಕ್ಷಿಗಳ ಹೇಳಿಕೆಗಳನ್ನು ಪಡೆಯುವ ಸಮಯದಲ್ಲಿ ಅವರು ಅವರ ಸೂಚನೆಯ ಮೇರೆಗೆ ಕ್ಯಾಮರಾದಲ್ಲಿ ನಿಪಿ.14 ರಂತೆ ವೀಡಿಯೋವನ್ನು ಚಿತ್ರೀಕರಿಸಿ, ನಿಪಿ-14 ಡಿವಿಡಿಗೆ ವರ್ಗಾಯಿಸಿ, ನಿಪಿ.15 ರಂತೆ ದೃಢೀಕರಣ ಪತ್ರವನ್ನು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-31 ಪ್ರಾಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 26.03.2018 ರಂದು ಚಿಕ್ಕಮಗಳೂರಿನ ಲೋಕೋಪಯೋಗಿ ಇಲಾಖೆಯ ಸಹಾಯಕ ಇಂಜಿನಿಯರರಾದ ಎಂ ವೈ ರವಿಕುಮಾರ್ ರವರನ್ನು ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿ ಸ್ಥಳವನ್ನು ತೋರಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-32 ಪ್ರಾಸಾ.11 ರವೀಂದ್ರನಾಥ ಎಸ್ ಜಹಗೀರದಾರ್, ಆಗಿನ ಕೊಪ್ಪ ವಿಭಾಗದ ಡಿವೈಎಸ್ಪಿ ಇವರು ತಮ್ಮ ಸಾಕ್ಷ್ಯದಲ್ಲಿ ಪ್ರಕರಣದ ತನಿಖೆಯನ್ನು ನಡೆಸುವಂತೆ ಪೊಲೀಸ್ ವರಿಷ್ಠಾಧಿಕಾರಿಗಳು ದಿಃ 10.01.2018 ರಂದು ನಿಪಿ.17 ರಂತೆ ಅವರಿಗೆ ಆದೇಶಿಸಿದ ಮೇರೆಗೆ, ಅದೇ ದಿನ ಪ್ರಕರಣದ ಕಡತವನ್ನು ಪ್ರಾಸಾ.9 ರವರಿಂದ ಪಡೆದು ಪರಿಶೀಲಿಸಿದ್ದಾಗಿ ಹಾಗೂ ಪ್ರಾಸಾ-3 ರವರ ಮುಂದುವರಿದ ಹೇಳಿಕೆಯನ್ನು ಪಡೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-33 ಪ್ರಾಸಾ.11 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅದೇ ದಿನ ಕೃತ್ಯ ನಡೆದಿದ್ದ ಸ್ಥಳಕ್ಕೆ ಭೇಟಿ ನೀಡಿ, ಪಂಚರಾದ ಪ್ರಾಸಾ-7 ಮತ್ತು ಚಾಸಾ.8 ರವರ ಸಮಕ್ಷಮ ಪ್ರಾಸಾ.3 ರವರು ಕೃತ್ಯ ಸ್ಥಳವನ್ನು ತೋರಿಸಿದ್ದಾಗಿ, ಅಲ್ಲಿಂದ ಸುಮಾರು 3 ವರೆ ಕಿ.ಮೀ. ದೂರದಲ್ಲಿದ್ದ ಉಜ್ಜಿನಿ ಬಸ್ ನಿಲ್ದಾಣಕ್ಕೆ ಪ್ರಾಸಾ.3 ರವರು ಅವರನ್ನು ಕರೆದುಕೊಂಡು ಹೋಗಿ ಅಲ್ಲಿ ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ಮಧ್ಯಾಹ್ನ 3.30 ರಿಂದ ಸಂಜೆ 5 ಗಂಟೆಯವರೆಗೆ ನಿಪಿ.5 ರಂತೆ ಪಂಚನಾಮೆಯನ್ನು ಜರುಗಿಸಿ, ಸ್ಥಳದ ನಕಾಶೆಯನ್ನು ತಯಾರಿಸಿ, ನಿಪಿ.8 ರಂತೆ ಫೋಟೋವನ್ನು ತೆಗೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-34 ಪ್ರಾಸಾ.11 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಸಾಕ್ಷಿದಾರರಾದ ಪ್ರಾಸಾ.4, 5, 6 ಮತ್ತು ಚಾಸಾ.3, 6, 7 ರವರ ಹೇಳಿಕೆಗಳನ್ನು ದಾಖಲಿಸಿದ್ದಾಗಿ, ಪ್ರಾಸಾ.4 ರವರು ನಿಪಿ.6 ರಂತೆ ಅವರಿಗೆ ಹೇಳಿಕೆಯನ್ನು ನೀಡಿದ್ದಾಗಿ, ಸಾಕ್ಷಿದಾರರ ಹೇಳಿಕೆ ಕಾಲದಲ್ಲಿ ಪ್ರಾಸಾ.10 ರವರು ಇಲಾಖಾ ಕ್ಯಾಮರಾದಲ್ಲಿ ವಿಡಿಯೋ ಚಿತ್ರೀಕರಿಸಿದ್ದು, ವಿಡಿಯೋವನ್ನು ಒಂದು ಖಾಲಿ ಡಿ.ವಿ.ಡಿ. ಗೆ ವರ್ಗಾಯಿಸಿ, ಭಾರತೀಯ ಸಾಕ್ಷ್ಯ ಅಧಿನಿಯಮ 65(ಬಿ) ಅಡಿಯಲ್ಲಿ ನಿಪಿ.15 ರಂತೆ ದೃಢೀಕರಣ ಪತ್ರವನ್ನು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ

ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-35 ಪ್ರಾಸಾ.11 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅದೇ ದಿನ ಅಂದರೆ ದಿಃ 10.01.2018 ರಂದು ಪ್ರಾಸಾ.3 ರವರ ಜಾತಿಯ ಬಗ್ಗೆ ವರದಿಯನ್ನು ನೀಡುವಂತೆ ಚಿಕ್ಕಮಗಳೂರು ತಹಸೀಲ್ದಾರ್ ರವರಿಗೆ ಮನವಿಯನ್ನು ಸಲ್ಲಿಸಿ, ದಿಃ 26.02.2018 ರಂದು ಚಾಸಾ.14 ರವರಿಂದ ನಿಪಿ.11 ರಂತೆ ವರದಿಯನ್ನು ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-36 ಪ್ರಾಸಾ.11 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 10.01.2018 ರಂದು ಪ್ರಾಸಾ.3 ರವರ ಗಾಯದ ಪ್ರಮಾಣಪತ್ರವನ್ನು ನೀಡುವಂತೆ ಪ್ರಾಸಾ.8 ರವರಿಗೆ ಮನವಿ ಸಲ್ಲಿಸಿ, ದಿಃ18.03.2018 ರಂದು ನಿಪಿ.12 ರಂತೆ ಪ್ರಾಸಾ.3 ರವರ ಗಾಯದ ಪ್ರಮಾಣಪತ್ರವನ್ನು ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-37 ಪ್ರಾಸಾ.11 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 10.01.2018 ರಂದು ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿ ಕೊಡಲು ಚಿಕ್ಕಮಗಳೂರು ಲೋಕೋಪಯೋಗಿ ಇಲಾಖೆಗೆ ಮನವಿಯನ್ನು ಸಲ್ಲಿಸಿ, ದಿಃ 04.05.2018 ರಂದು ಕೃತ್ಯ ನಡೆದ ಸ್ಥಳದ ನಕ್ಷೆ ನಿಪಿ.16 ನ್ನು ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-38 ಪ್ರಾಸಾ.11 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆರೋಪಿತರಾದ ನೀವು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನನ್ನು ಪಡೆದು ದಿಃ13.01.2018 ರಂದು ಅವರ ಮುಂದೆ ಹಾಜರಾದಾಗ ಅವರು ದಸ್ತಗಿರಿ ಕ್ರಮ ಅನುಸರಿಸಿ ನಿಮ್ಮನ್ನು ವಿಚಾರಣೆಗೆ ಒಳಪಡಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು

ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-39 ಪ್ರಾಸಾ.11 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಕೃತ್ಯಕ್ಕೆ ಬಳಸಿದ್ದ ಬೈಕ್ ಮತ್ತು ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಹಾಜರುಪಡಿಸುವಂತೆ 1 ನೇ ಆರೋಪಿಯಾದ ನಿನಗೆ ನೋಟೀಸನ್ನು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು

ಪ್ರಶ್ನೆ-40 ಪ್ರಾಸಾ.11 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ19.02.2018 ರಂದು 1 ನೇ ಆರೋಪಿಯಾದ ನೀನು ಕೃತ್ಯಕ್ಕೆ ಬಳಸಿದ ಕೆಎ-18-ಇಬಿ-0912 ಬೈಕನ್ನು ಅವರ ಮುಂದೆ ಹಾಜರುಪಡಿಸಿದ ಮೇರೆಗೆ ಸದರಿ ಬೈಕನ್ನು ಪ್ರಾಸಾ.1 ಮತ್ತು 2 ರವರ ಸಮಕ್ಷಮ ಬಾಳೆಹೊನ್ನೂರು ಪೊಲೀಸ್ ಠಾಣಾ ಆವರಣದಲ್ಲಿ ಸಂಜೆ 5.45 ರಿಂದ 6.30 ಗಂಟೆಯವರೆಗೆ ನಿಪಿ.1 ರಂತೆ ಪಂಚನಾಮೆಯನ್ನು ಜರುಗಿಸಿ ಅಮಾನತುಪಡಿಸಿಕೊಂಡು ನಿಪಿ.2 ರಂತೆ ಫೋಟೋವನ್ನು ತೆಗೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಪೋಲೀಸರು ಫೋನ್ ಮಾಡಿ ಹೇಳಿದ್ದರಿಂದ ಬೈಕನ್ನು ಹಾಜರು ಪಡಿಸಿದ್ದೇನೆ,ಆದರೆ ಅವರು ಕೇಸು ಮಾಡಿರುವ ವಿಚಾರ ನನಗೆ ಗೊತ್ತಿಲ್ಲ.

ಪ್ರಶ್ನೆ-41 ಪ್ರಾಸಾ.11 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು 1 ನೇ ಆರೋಪಿಯಾದ ನೀನು ಹಾಜರುಪಡಿಸಿದ ಬೈಕಿಗೆ ಸಂಬಂಧಿಸಿದ ನೊಂದಣಿ ಪ್ರಮಾಣಪತ್ರ ಮತ್ತು ವಿಮಾ ಪಾಲಿಸಿಯ ಪ್ರತಿಯನ್ನು ಕಡತಕ್ಕೆ ಅಳವಡಿಸಿ ಸದರಿ ಬೈಕನ್ನು ನಿಪಿ.18 ರಂತೆ ಮಾಲುಪಟ್ಟಿ ಸಂಃ 21/2018 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1-ಸುಳ್ಳು

ಪ್ರಶ್ನೆ-42 ಪ್ರಾಸಾ.11 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 18.05.2018 ರಂದು ಆರೋಪಿತರಾದ ನಿಮ್ಮ ಜಾತಿಯ ಬಗ್ಗೆ ನಿಪಿ.10 ರಂತೆ ವರದಿಯನ್ನು ಚಾಸಾ.15 ರವರಿಂದ ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-43 ಪ್ರಾಸಾ.11 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ನ್ಯಾಯಾಲಯದ ಆದೇಶದ ಮೇರೆಗೆ ಅಮಾನತು ಪಡಿಸಿಕೊಂಡಿದ್ದ ಬೈಕನ್ನು ದಿಃ 22.03.2018 ರಂದು ಸದರಿ ಬೈಕಿನ ಮಾಲೀಕರಾದ ಯು.ಎಂ.ಹೂವಪ್ಪಗೌಡ ಬಿನ್ ಮಂಜಪ್ಪಗೌಡರವರಿಗೆ ಚಾಸಾ.12 ಮತ್ತು 13 ರವರ ಸಮಕ್ಷಮ ನಿಪಿ.9 ರಂತೆ ಪಂಚನಾಮೆಯನ್ನು ಜರುಗಿಸಿ ಬಿಡುಗಡೆ ಮಾಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ-44 ಪ್ರಾಸಾ.11 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆರೋಪಿತರಾದ ನಿಮ್ಮ ವಿರುದ್ಧ ಆರೋಪ ಸಾಭೀತಾದ ಕಾರಣ ದಿಃ 02.06.2018 ರಂದು ನಿಮ್ಮ ವಿರುದ್ಧ ಕರಡು ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ಅದನ್ನು ಚಿಕ್ಕಮಗಳೂರು ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸಲ್ಲಿಸಿ, ದಿಃ 06.07.2018 ರಂದು ಸದರಿಯವರು ನೀಡಿದ ಆದೇಶವನ್ನು ಸ್ವೀಕರಿಸಿ ನಿಮ್ಮ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1- ಸುಳ್ಳು
ಆ 2- ಸುಳ್ಳು
ಆ 3- ಸುಳ್ಳು

ಪ್ರಶ್ನೆ -45 ನೀವೇನಾದರೂ ಹೇಳುವುದು ಇದೆಯೇ?

ಉತ್ತರಃ ಆ 1- ಇಲ್ಲ
ಆ 2- ಇಲ್ಲ
ಆ 3- ಇಲ್ಲ

ಪ್ರಶ್ನೆ-46 ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ?

ಉತ್ತರಃ ಆ 1- ಇಲ್ಲ
ಆ 2- ಇಲ್ಲ
ಆ 3- ಇಲ್ಲ

(ಮೇಲಿನ ಪ್ರಶ್ನೆಗಳನ್ನು ಆರೋಪಿತರಿಗೆ ಕೇಳಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಕೇಳಿ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ)

ದಿನಾಂಕಃ 28.10.2025

ಸಹಿ/-
(ಭಾನುಮತಿ ಬಿ.ಸಿ. )
1 ನೇ ಅಪರ ಸತ್ರ ಮತ್ತು ವಿಶೇಷ ನ್ಯಾಯಾಧೀಶರು
ಚಿಕ್ಕಮಗಳೂರು